**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಓ.ಎಸ್.253/2021**

**ಪಿ.ಡಬ್ಲ್ಯೂ - 1**

**ಪ್ರಮಾಣೀಕರಿಸಿದ ದಿನಾಂಕ:14.03.2025**

ಮುಂದುವರೆದ ಪಾಟೀ **ಸವಾಲು : ಪ್ರತಿ**ವಾದಿ ಪರ ವಕೀಲರಿಂದ **: -**

ಸರ್ವೆ ನಂ.223 ಒಟ್ಟು 13 ಎಕರೆ 13 ಗುಂಟೆ ವಿಸ್ತೀರ್ಣದಾಗಿರುತ್ತದೆ. ನಾನು ಜನಿಸುವ ಮೊದಲೇ ಸದರಿ ಸ್ವತ್ತು ಅಸ್ತಿತ್ವದಲ್ಲಿರುತ್ತದೆ ಎಂದರೆ ಸರಿ. ಅಂದಿನಿಂದ ಇಂದಿನವರೆಗೂ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಅನೇಕ ವ್ಯವಹಾರಗಳಾಗಿದ್ದು, ಅದರ ಚಕ್ಕುಬಂದಿ ಬದಲಾಗಿರುತ್ತದೆ ಎಂದರೆ ಇರಬಹುದು. ಸಾಮಾನ್ಯವಾಗಿ ಕ್ರಯದ ಕರಾರುಪತ್ರವನ್ನು ಮಾಡಿಕೊಡುವವರು ಸ್ವತ್ತಿನ ಮಾಲೀಕರಾಗಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಅದೇ ರೀತಿ ಮಾಲೀಕರ ಹೆಸರಿನಲ್ಲಿ ದಾಖಲೆಗಳು ಸಹ ಇರುತ್ತವೆ ಎಂದರೆ ಇರಬಹುದು. ನಿ.ಡಿ.1 ನಾನು ಸಲ್ಲಿಸಿರುವ ದಾವೆಯ ವಾದಪತ್ರವಾಗಿರುತ್ತದೆ ಎಂದರೆ ಸರಿ. ನಿ.ಡಿ.1 ರ 3ನೇ ಖಂಡಿಕೆಯಲ್ಲಿ ಮುನಿಯಮ್ಮ ಎಂಬುವವರು ಮರಣ ಹೊಂದಿದ್ದು, ನಿ.ಡಿ.1 ರ ದಾವೆಯ ಪ್ರತಿವಾದಿಗಳು ಸದರಿ ಮುನಿಯಮ್ಮನವರ ವಾರಸುದಾರರಾಗಿದ್ದು, ಅವರೇ ಸ್ವತ್ತುಗಳ ಉತ್ತರಾಧೀಕಾರಿಗಳಾಗಿರುತ್ತಾರೆ ಎಂದು ಬರೆದಿರುವ ಬಗ್ಗೆ ನನಗೆ ನೆನಪಿಲ್ಲ. ನಿ.ಡಿ.1 ರಲ್ಲಿ ಆ ದಾವೆಯ ಪ್ರತಿವಾದಿಗಳು ಸ್ವಾಧೀನದಲ್ಲಿರುತ್ತಾರೆ ಎಂದು ಬರೆದಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಆ ದಾವೆಯಲ್ಲಿ ಸ್ವಾಧೀನ ಕೋರಿ ಪರಿಹಾರ ಕೋರಿರುವ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿ.ಡಿ.1 ಅನ್ನು ಓದಿ ಹೇಳಿ ಅದರಲ್ಲಿರುವ ಪರಿಹಾರಗಳ ಬಗ್ಗೆ ನಿರ್ದಿಷ್ಟವಾಗಿ ಓದಿ, ಹೇಳಿ ಅದರಲ್ಲಿ ಸ್ವಾಧೀನ ಕೋರಿ ಪರಿಹಾರ ಇರುವುದಿಲ್ಲ ಎಂದು ಕೇಳಲಾಗಿ ಸಾಕ್ಷಿ ಸುಳ್ಳು ಪ್ರಶ್ನೆಯನ್ನು ಕೇಳುತ್ತಿದ್ದಾರೆ ಎಂದು ನುಡಿಯುತ್ತಾರೆ. ನಿ.ಡಿ.1 ರ ದಾವೆಯಲ್ಲಿ ಪ್ರತಿವಾದಿಗಳು ನ್ಯಾಯಾಲಯಕ್ಕೆ ಹಾಜರಾಗಿ ವಕೀಲರ ಮುಖಾಂತರ ದಾವೆಯನ್ನು ನಡೆಸಿರುತ್ತಾರೆ. ಸಾಕ್ಷಿಗೆ ಓ.ಎಸ್.223/2011 ರಲ್ಲಿ ಸಾಕ್ಷಿ ಸಾಕ್ಷ್ಯ ನುಡಿದ ದೃಢೀಕೃತ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿದ್ದರಿಂದ ಅದನ್ನು ನಿ.ಡಿ.5 ಎಂದು ಗುರುತಿಸಲಾಯಿತು. ನಿ.ಡಿ.5 ರಲ್ಲಿಯೂ ಸಹ, ಆ ದಾವೆಯ ಪ್ರತಿವಾದಿಗಳು ಸ್ವಾಧೀನದಲ್ಲಿರುವ ಬಗ್ಗೆ ಬರೆದಿರುವುದಿಲ್ಲ ಎಂದರೆ ಸರಿ. ಸದರಿ ದಾವೆಯ ಪ್ರತಿವಾದಿಗಳಾದ

ಪೂಜಪ್ಪ ಬಿನ್ ನರಸಿಂಹಯ್ಯ ಮತ್ತು ಪೂಜಪ್ಪ ಬಿನ್ ಗೋಣಪ್ಪನವರಿಗೆ ಸರ್ವೆ ನಂ.22/3 ರಲ್ಲಿ ದಾವಾ ಸ್ವತ್ತು ಹೊರತುಪಡಿಸಿ, ಬೇರೆ ಭಾಗದಲ್ಲಿ 3 ಎಕರೆ ಜಮೀನು ಇತ್ತು. ಸಾಕ್ಷಿಗೆ ಮೂರು ಪಹಣಿಗಳನ್ನು ತೋರಿಸಲಾಗಿ ಸದರಿ ಪಹಣಿಗಳಲ್ಲಿ ಮಾಲೀಕರು ಹಾಗೂ ಸ್ವಾಧೀನದಾರರ ಕಾಲಂನಲ್ಲಿ ಯಾರ ಹೆಸರು ಇರುತ್ತದೆ ಎಂದು ಕೇಳಲಾಗಿ ಸಾಕ್ಷಿ ಮುನಿಯಮ್ಮನವರ ಹೆಸರು ಇರುತ್ತದೆ ಎಂದು ನುಡಿದಿದ್ದು ಮತ್ತು ಒಪ್ಪಿದ್ದರಿಂದ ಅವುಗಳನ್ನು ನಿ.ಡಿ.6 ರಿಂದ 8 ಎಂದು ಗುರುತಿಸಲಾಯಿತು.

ನಾನು ಓ.ಎಸ್.223/2011 ದಾವೆಯನ್ನು ನಿ.ಡಿ.6 ರಿಂದ 8 ರಲ್ಲಿರುವ ಸ್ವತ್ತು ಸರ್ವೆ ನಂ.223/ಪಿ-5 ಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ್ದೆ. ಸಾಕ್ಷಿಗೆ ಇನ್ನೊಂದು ಪಹಣಿ ತೋರಿಸಲಾಗಿ, ಅದು ಒಟ್ಟುಗೂಡಿಸಿರುವ ಸರ್ವೆ ನಂ.223 ಕ್ಕೆ ಸಂಬಂಧಿಸಿದಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪಹಣಿಯಲ್ಲಿ 33 ಎಕರೆ ಮೇಲೆ ಸ್ವಲ್ಪ ಗುಂಟೆಯಷ್ಟು ವಿಸ್ತೀರ್ಣವನ್ನು ತೋರಿಸಿರುತ್ತದೆ. ಸಾಕ್ಷಿ ಅದನ್ನು ಒಪ್ಪಿದ್ದರಿಂದ ಅದನ್ನು ನಿ.ಡಿ.9 ಎಂದು ಗುರುತಿಸಲಾಯಿತು. ಸದರಿ ಪಹಣಿಯ 2 ನೇ ಪುಟದಲ್ಲಿ ನನ್ನ ಹೆಸರಿಗೆ ಎಂ.ಆರ್.ನಂ.ಹೆಚ್.24/2019-20 ದಿ:05.10.2019 ರಂತೆ ಮೂರು ಎಕರೆ ಜಮೀನು ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಅದನ್ನು ಒಪ್ಪಿದ್ದರಿಂದ ಸದರಿ ನಮೂದನ್ನು ನಿ.ಡಿ.9(ಎ) ಎಂದು ಗುರುತಿಸಲಾಯಿತು. ಅದೇ ರೀತಿ 3 ನೇ ಪುಟದಲ್ಲಿ ಪೂಜಪ್ಪ ಬಿನ್ ಗೋಣಪ್ಪ ಅವರ ಹೆಸರಿಗೆ ಎಂ.ಆರ್.ನಂ.49/2014-15 ರಂತೆ 3 ಎಕರೆ ಜಮೀನು ನಮೂದಾಗಿರುವ ಬಗ್ಗೆ ಕೇಳಲಾಗಿ ಸಾಕ್ಷಿ ಅದನ್ನು ಒಪ್ಪಿದ್ದರಿಂದ ಅದನ್ನು ನಿ.ಡಿ.9(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ ಮಲ್ಲಮ್ಮ ಕೋಂ ಮುನಿಯಪ್ಪ ಅವರ ಹೆಸರಿಗೆ ಎಂ.ಆರ್.ನಂ.ಹೆಚ್-69/2019-20 ದಿ:23.03.2020 ರಂತೆ 1 ಎಕರೆ ಜಮೀನು ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಸದರಿ ನಮೂದುನ್ನು ಒಪ್ಪಿದ್ದರಿಂದ ಅದನ್ನು ನಿ.ಡಿ.9(ಸಿ) ಎಂದು ಗುರುತಿಸಲಾಯಿತು. ನಿ.ಡಿ.9 ರಲ್ಲಿ ಸ್ವಾಧೀನದಾರರ ಕಾಲಂನಲ್ಲಿ ಈ ಮೇಲೆ ಹೇಳಿದ ಮೂರು ಜನರ ಹೆಸರುಗಳು ನಮೂದಿವೆ ಎಂದರೆ ಸರಿ.

ಆರ್.ಆರ್.ಟಿ ನಂ.489/2018-19 ಪ್ರಕರಣವನ್ನು ಪೂಜಪ್ಪ ನನ್ನ ವಿರುದ್ದ ಸಲ್ಲಿಸಿದ್ದರು. ನಿ.ಪಿ.2 ರಲ್ಲಿ ಪೂಜಪ್ಪನವರ ಹೆಸರು ಇರುವುದಿಲ್ಲ ಎಂದರೆ ಸರಿ. ಮುನಿಯಮ್ಮ ನ ಹೆಸರು ಇರುತ್ತದೆ ಎಂದರೆ ಸರಿ. ಸದರಿ ಆರ್.ಆರ್.ಟಿ ಪ್ರಕರಣವನ್ನು ಮುನಿಯಮ್ಮನವರ ವಿರುದ್ದ

ನಾನು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ನಿ.ಪಿ.7 ರಲ್ಲಿ 1, 2 ಮತ್ತು 4 ನೇ ಪ್ರತಿವಾದಿಗಳ ಹೆಸರು ಬರೆದಿರುವುದಿಲ್ಲ ಎಂದರೆ ಸರಿ. ನಿ.ಪಿ.7 ರಲ್ಲಿ ನಾನು ನಾಗರಾಜರೆಡ್ಡಿಯನ್ನುವವರ ವಿರುದ್ದ ದೂರು ಸಲ್ಲಿಸಿದ್ದೆ ಎಂದು ಬರೆದಿರುತ್ತದೆ. ನಿ.ಪಿ.8 ರಲ್ಲಿ ನಮೂದಿಸಿರುವ ಎನ್.ಸಿ.ಆರ್.ನಂ.38/21 ರ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಿ.ಪಿ.9 ರಲ್ಲಿ 1, 2 ಮತ್ತು 4 ನೇ ಪ್ರತಿವಾದಿಗಳ ಹೆಸರು ಬರೆದಿರುವುದಿಲ್ಲ ಎಂದರೆ ಸರಿ. ಅದೇ ರೀತಿ ನಿ.ಪಿ.10 ರಲ್ಲಿಯೂ ಸಹ ಸದರಿ ಪ್ರತಿವಾದಿ ನಂ.1, 2 ಮತ್ತು 4 ರವರ ಹೆಸರು ಇರುವುದಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**